ಸಿ.ಸಿ. ನಂ. 315 – 2014

ಪಿ.ಡಬ್ಲ್ಯೂ.1

ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸ ಸ ಅ ರವರಿಂದಃ-

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಆರೋಪಿ ಸಿದ್ದಪ್ಪ ಇವರ ಮೂಲ ಕೆಮ್ಯುಲೇಟಿವ್ ರೆಕಾರ್ಡ್‌ನ್ನು ತನಿಖಾಧಿಕಾರಿಗೆ ದೂರಿನೊಂದಿಗೆ ಕೊಟ್ಟಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ನಿ.ಪಿ.2 ಅಂತಾ ಗುರುತಿಸಲಾಯಿತು. ಸದರಿ ದಾಖಲೆಯು ಸಿದ್ದಪ್ಪ.ಕೆ. ತಂದೆ ಎಲ್ಲಪ್ಪ ಇವರ ಹೆಸರಲ್ಲಿ ಇರುತ್ತದೆ. ಆರೋಪಿಯ ಸರ್ವೀಸ್ ರಿಜಿಸ್ಟರನ್ನು ಹಾಜರುಪಡಿಸಿರುತ್ತೇನೆ. ಅದನ್ನು ಸಾಕ್ಷಿ ನೊಜೇಡಿ ಗುರುತಿಸಿದ್ದು ನಿ.ಪಿ.3 ಅಂತಾ ಗುರುತಿಸಲಾಯಿತು. ಸೇವಾ ಪುಸ್ತಕದಲ್ಲಿ ಅರೋಪಿಯ ಹೆಸರು ಕೆ.ಸಿದ್ದಪ್ಪ ಅಂತಾ ಇರುತ್ತದೆ. ತಂದೆ ಹೆಸರು ಎಲ್ಲಪ್ಪ ಅಂತಾ ಇರುತ್ತದೆ. ಅವರ ಜನ್ಮ ದಿನಾಂಕ 06-03-1954 ಅಂತಾ ನಮೂದಾಗಿರುತ್ತದೆ. ನಿ.ಪಿ.2 ರ ಪುಸ್ತಕದ ರೀತಿಯಲ್ಲಿ ಜನ್ಮ ದಾಖಲೆಯನ್ನು ನಮೂದು ಮಾಡಿರುತ್ತಾರೆ. ಸದರಿ ಭಾಗವನ್ನು ನಿ.ಪಿ.3ಎ ಅಂತಾ ಗುರುತಿಸಲಾಯಿತು. ಜನರಲ್ ಇನ್‌ಫಾರ್ಮೇಷನ್ ಕಾಪಿಯ ಜೆರಾಕ್ಸ್ ಪ್ರತಿಯನ್ನು ಪಡೆದಿರುತ್ತೇನೆ. ಅದು ಜೆರಾಕ್ಸ್ ಇರುವ ಕಾರಣ ಗುರುತು ಹಾಕಲಿಲ್ಲ, ಸದರಿ ದಾಖಲೆಯನ್ನು ಹೆಡ್ ಮಾಸ್ಟರ್ ಮುನ್ಸಿಪಾಲ್ ಹೈಸ್ಕೂಲ್ ಇವರಿಂದ ಪಡೆದಿರುತ್ತೇನೆ. ಸಿದ್ದಪ್ಪ.ಕೆ. ತಂದೆ ಎಲ್ಲಪ್ಪ ಇವರ ಹೆಸರಿನಲ್ಲಿ ಇರುತ್ತದೆ. ಅದರಲ್ಲಿ ಜನ್ಮದಿನಾಂಕ ದಿಃ06-03-1954 ಅಂತಾ ನಮೂದು ಇರುತ್ತದೆ. ಸದರಿ ಹೈಸ್ಕೂಲ್‌ನಿಂದ ಅಡ್ಮಿಷನ್ ರಿಜಿಸ್ಟರನ್ನು ಪಡೆದಿರುತ್ತೇನೆ. ಸಾಕ್ಷಿಯು ಸದರಿ ರಿಜಿಸ್ಟರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.4 ಅಂತಾ ಗುರುತಿಸಲಾಯಿತು. ನಿ.ಪಿ.4 ರ ಕ್ರ.ಸಂಖ್ಯೆ.100/64-65 ನೇ ಕ್ರಮಸಂಖ್ಯೆಯಲ್ಲಿ ತಂದೆಯ ಹೆಸರು ಎಲ್ಲಪ್ಪ, ವಿಳಾಸ ಕಟ್ಟಿಗಿ, ಜನ್ಮ ದಿನಾಂಕಃ 06-03-1951 ಅಂತಾ ನಮೂದು ಇರುತ್ತದೆ. ಅದನ್ನು ನಿ.ಪಿ.4ಎ ಅಂತಾ ಗುರುತಿಸಲಾಯಿತು. ಜಿಲ್ಲಾ ನೋಂದಣಾಧಿಕಾರಿಗಳ ವರದಿಯ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದು ಜೆರಾಕ್ಸ್ ಪ್ರತಿಯಾದ್ದರಿಂದ ಗುರುತು ಹಾಕಲಿಲ್ಲ, ಕೆ.ಸಿದ್ದಪ್ಪ ಇವರು ಜನ್ಮ ದಿನಾಂಕವನ್ನು ತದ್ದಿಲ್ಲ, ಇದು ಸತ್ಯಕ್ಕೆ ದೂರವಾಗಿದೆ ಎಂದು ವರದಿಯನ್ನು ಕೊಟ್ಟಿರುತ್ತಾರೆ. ಅದರ ಮೂಲ ಪ್ರತಿ ಜಿಲ್ಲಾ ನೋಂದಣಾಧಿಕಾರಿ ಇವರ ಕಛೇರಿಯಲ್ಲಿ ಇರುತ್ತದೆ. ಸರ್ಕಾರಿ ಬಾಯ್ಸ್ ಮಿಡ್ಲಿಸ್ಕೂಲ್ ಇವರಿಂದ ಆರೋಪಿಯ ವರ್ಗಾವಣೆ ಪ್ರಮಾಣಪತ್ರವನ್ನು ಪಡೆದಿರುತ್ತೇನೆ. ಅದನ್ನು ನಿ.ಪಿ.5 ಅಂತಾ ಗುರುತಿಸಲಾಯಿತು. ಅದರಲ್ಲಿ ಆರೋಪಿಯ ಹೆಸರು ಕೆ.ಸಿದ್ದಪ್ಪ ತಂದೆ ಎಲ್ಲಪ್ಪ, ಜನ್ಮ ದಿಃ06-03-1951 ಅಂತಾ ನಮೂದು ಇರುತ್ತದೆ. ಅಡ್ಮಿಷನ್ ನಂ.7/61-2 ಅಂತಾ ಇರುತ್ತದೆ. ಆರೋಪಿಯು ಸದರಿ ಶಾಲೆಗೆ ದಾಖಲಾಗಲು ಕೊಟ್ಟಂತ ಪ್ರವೇಶ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.6 ಅಂತಾ ಗುರುತಿಸಲಾಯಿತು. ಅದರಲ್ಲಿ ಅರೋಪಿಯ ಹೆಸರು ಕಟಗಿ ಸಿದ್ದಪ್ಪ ತಂದೆ ಎಲ್ಲಪ್ಪ ಜನ್ಮ ದಿನಾಂಕಃ 06-03-1951 ಅಂತಾ ನಮೂದು ಇರುತ್ತದೆ. ಸದರಿ ಜನ್ಮ ದಿನಾಂಕವನ್ನು ನಿ.ಪಿ.6ಎ ಅಂತಾ ಗುರುತಿಸಲಾಯಿತು. ಮೈಸೂರು ಎಜುಕೇಷನ್ ಡಿಪಾರ್ಟ್‌ಮೆಂಟಿನ ಅಪ್ಪಣೆಯ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.7 ಅಂತಾ ಗುರುತಿಸಲಾಯಿತು. ಅದರಲ್ಲಿ ಅರೋಪಿಯ ಹೆಸರು ಕಟಗಿ ಸಿದ್ದಪ್ಪ ತಂದೆ ಎಲ್ಲಪ್ಪ ಜನ್ಮ ದಿನಾಂಕಃ 06-03-1951 ಅಂತಾ ನಮೂದು ಇರುತ್ತದೆ. ಜನ್ಮಾದಿನಾಂಕವನ್ನು ನಿ.ಪಿ.7ಎ ಅಂತಾ ಗುರುತಿಸಲಾಯಿತು. ಆರೋಪಿಯು ತನ್ನ ಜನ್ಮ ದಿನಾಂಕವನ್ನು

ಮೂಲ ದಾಖಲಾತಿಯಲ್ಲಿ 06-03-1951 ಅಂತಾ ಇದ್ದು, ನಂತರ ಇಲಾಖೆಯ ಎಸ್‌ಆರ್ ನಲ್ಲಿ ಮತ್ತು ಕೆಮ್ಯುಲೆಟಿವ್ ಕಾರ್ಡ್‌ನಲ್ಲಿ ತನ್ನ ಜನ್ಮ ದಿನಾಂಕವನ್ನು 06-03-1954 ಎಂದು ತಿದ್ದಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಈ ರೀತಿ ತಿದ್ದಿ ಸರ್ಕಾರಕ್ಕೆ ನಷ್ಟ ಮಾಡಿ ಮೋಸ ಮಾಡಿರುತ್ತಾರೆ. ಸಾಕ್ಷಿಯು ಮುಂದುವರೆದು ಆರೋಪಿಯು ಉದ್ದೇಶಪೂರ್ವಕವಾಗಿ ತನ್ನ ಜನ್ಮದಿನಾಂಕವನ್ನು ತಿದ್ದಿ ಸೃಷ್ಟಿಸಿ ಫೋರ್ಜರಿ ಮಾಡಿ ವಂಚಿಸಿರುತ್ತಾನೆ.

ಪಾಟೀಸವಾಲು ಶ್ರೀ.ಎಸ್.ಹೆಚ್. ವಕೀಲರು ವೈ.ಜೆ.ಆರ್. ವಕೀಲರಿಗೆ ಪ್ರತಿನಿಧಿಸಿ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಾಕ್ಷಿಯು ಚಿಕ್ಕಮಂಗಳೂರು ಜಿಲ್ಲೆಯಿಂದ ಬಂದಿದ್ದು, ಮತ್ತು ಸದರಿಯವರು ಸರ್ಕಾರಿ ನೌಕರರಾಗಿದ್ದು, ರೂ.500-00 ಖರ್ಚಿನೊಂದಿಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯ್ತು)

ಓದಿ ಹೇಳಿ ಕೇಳಿ ಸರಿಯಿದೆ,

ನನ್ನ ಸಮಕ್ಷಮ

ಪ್ರಧಾನ ಜೆ.ಎಂ.ಎಫ್.ಸಿ., ಹೊನ್ನಾಳಿ